ಇಸಿಇ/02/ಐ.ಎಂ.ಎಲ್/2012

ಅಬಕಾರಿ ಆಯುಕ್ತರ ಕಛೇರಿ,
2ನೇ ಮಹಡಿ, ಟಿ.ಟಿ.ಎಂ.ಸಿ 'ಎ' ಬ್ಲಾಕ್,
ಬಿ.ಎಂ.ಟಿ.ಸಿ ಕಟ್ಟಡ, ಶಾಂತಿನಗರ,
ಬೆಂಗಳೂರು, ದಿನಾಂಕ 08-07-2015.

**-: ಸುತ್ತೋಲೆ :-**

ವಿಷಯ ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರಾಟ ಮಾಡುವುದನ್ನು ತಡೆಗಟ್ಟುವ ಬಗ್ಗೆ.

******

ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 10(1)(e) ರಲ್ಲಿ 21 ವರ್ಷದೊಳಗಿನ ವ್ಯಕ್ತಿಗಳಿಗೆ ಮದ್ಯ ಮಾರಾಟವನ್ನು ನಿಷೇಧಿಸಿರುವುದರ ಜೊತೆಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 20ರಡಿ ಸನ್ನದು ಆವರಣದಲ್ಲಿ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ಸಹ ನಿಷೇದಿಸಿದೆ. ಇವುಗಳ ಉಲ್ಲಂಘನೆಯು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಪಬ್, ಬಾರ್ ಮತ್ತು ರೆಸ್ಟೋರೆಂಟ್ ಸನ್ನದುದಾರರುಗಳು ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರಾಟ/ಸರಬರಾಜು ಮಾಡುವುದನ್ನು ತಡೆಗಟ್ಟುವುದು ಇಲಾಖೆಯ ಮುಖ್ಯ ಜವಾಬ್ದಾರಿಯಲ್ಲೊಂದಾಗಿರುತ್ತದೆ.

ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯವನ್ನು ಮಾರಾಟ/ಸರಬರಾಜು ಮಾಡುವುದನ್ನು ತಡೆಗಟ್ಟಲು ಈ ಕೆಳಕಂಡ ನಿರ್ದೇಶನಗಳನ್ನು ನೀಡಿದೆ.

1. ನಿಮ್ಮ ಜಿಲ್ಲೆಯ ಸನ್ನದುದಾರರುಗಳ ಜೊತೆ ಸಭೆಯನ್ನು ನಡೆಸಿ, ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯವನ್ನು ಮಾರಾಟ/ಸರಬರಾಜು ಮಾಡುವ ಸಂಬಂಧವಾಗಿ ಕಾನೂನಿನಲ್ಲಿ ಇರುವ ನಿಷೇದದ ಬಗ್ಗೆ ಸನ್ನದುದಾರರಿಗೆ ಮನದಟ್ಟು ಮಾಡುವುದರ ಜೊತೆಗೆ, ನಿಯಮಗಳಲ್ಲಿನ ನಿಷೇದವನ್ನು ಉಲ್ಲಂಘಿಸಿ ಮದ್ಯ ಮಾರಾಟ ಮಾಡುತ್ತಿರುವವರ ಮೇಲೆ ಅಂತವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕೂಡಲೇ ನಿಯಮಾನುಸಾರ ಕ್ರಮ ಜರುಗಿಸತಕ್ಕದ್ದು.

2. ಜನರಲ್ಲಿ ಇಲಾಖೆಯ ಧ್ಯೇಯೊದ್ದೇಶದ ಬಗ್ಗೆ ಅರಿವು ಮೂಡಿಸುವುದ ಜೊತೆಗೆ ಅಪ್ರಾಪ್ತ ವಯಸ್ಸಿನ ಮಕ್ಕಳು ಮದ್ಯವಸನಕ್ಕೆ ಶರಣಾಗದಂತೆ ಗ್ರಾಮ ಸಭೆ ಪಂಚಾಯ್ತಿ ಸಭೆಗಳಲ್ಲಿ ಮನವರಿಕೆ ಮಾಡುತಕ್ಕದ್ದು.

3. ಜಾರಿ ಮತ್ತು ತನಿಖಾ ಚಟುವಟಿಗಳನ್ನು ಚುರುಕುಗೊಳಸಿ. ರಸ್ತೆ ಗಸ್ತು, ರಾತ್ರಿ ಗಸ್ತುಗಳಂತಹ ಕಾರ್ಯವನ್ನು ಕಟ್ಟುನಿಟ್ಟಾಗಿ ಕೈಗೊಳ್ಳತ್ತಕದ್ದು. ರಸ್ತೆಗಸ್ತು ನಿರ್ವಹಿಸುವ ಸಂದರ್ಭದಲ್ಲಿ ವ್ಯಾಪ್ತಿಯಲ್ಲಿಬರುವ ಸನ್ನದುಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯವನ್ನು ಮಾರಾಟ/ಸರಬರಾಜು ಆಗುತ್ತಿದೆಯೆ ಎಂಬುದರ ಬಗ್ಗೆ ವಿಚಾರಿಸುವುದು ಹಾಗೂ ಆಗುತ್ತಿದ್ದಲ್ಲಿ ಕ್ರಮ ಜರುಗಿಸುವುದು.

ರವಾನಿಸಿದೆ
ದಿನಾಂಕ 9/7/2015

4. ಅಬಕಾರಿ ಕೈಪಿಡಿಯಲ್ಲಿ ನೀಡಿರುವ ನಿರ್ದೇಶನಗಳನ್ನು ಮತ್ತು ಈ ಕಛೇರಿಯಿಂದ ಕಾಲ ಕಾಲಕ್ಕೆ ನೀಡಲಾಗುತ್ತಿರುವ ನಿರ್ದೇಶನಗಳನ್ನು ಚಾಚೂತಪ್ಪದೆ ಪಾಲಿಸತಕ್ಕದ್ದು.

5. ತಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ವಲಯ ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಸನ್ನದುಗಳನ್ನು ಅನಿರೀಕ್ಷಿತವಾಗಿ ತಪಾಸಣೆ ನಡೆಸಲು ಸೂಚಿಸುವುದು. ವಿಶೇಷವಾಗಿ ಪಬ್‌ಗಳು ಹಾಗೂ ಮೈಕ್ರೋಬ್ರೀವರಿಗಳನ್ನು ನಿಯಮಿತವಾಗಿ ತಪಾಸಣೆ ನಡೆಸುವುದು.

6. ಈ ವಿಷಯವಾಗಿ ದೂರುಗಳು ಮತ್ತು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅಂತಹ ಸನ್ನದು ಸ್ಥಳಗಳಿಗೆ ವಿಳಂಬವಿಲ್ಲದೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಲು ಮತ್ತು ಕಾನೂನು ಉಲ್ಲಂಘಿಸುತ್ತಿರುವ ಸನ್ನದುದಾರರು ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳತ್ತಕ್ಕದ್ದು.

7. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯವನ್ನು ಮಾರಾಟ/ಸರಬರಾಜು ಮಾಡುವುದು ಕಂಡುಬಂದಲ್ಲಿ ಸದರಿ ಉಲ್ಲಂಘನೆ ಸಂಬಂಧ ಸ್ಥಳ ಮಹಜರ್ ಕ್ರಮ ಜರುಗಿಸಿ, ಪ್ರಕರಣಗಳನ್ನು ದಾಖಲಿಸಿದ ಬಗ್ಗೆ ವಲಯಗಳ ಕಾರ್ಯನಿರ್ವಾಹಕ ಸಿಬ್ಬಂದಿಗಳಿಂದ ವಾರಕೊಮ್ಮೆ ವರದಿಯನ್ನು ಪಡೆಯತ್ತಕ್ಕದ್ದು.

8. ಈ ವಿಷಯವಾಗಿ ಕಾರ್ಯನಿರ್ವಾಹಕ ಸಿಬ್ಬಂದಿಗಳಿಂದ ಪಡೆದ ವರದಿಯನ್ನಾಧರಿಸಿ ಸಂಕ್ಷಿಪ್ತವಾದ ವರದಿಯನ್ನು ಅಬಕಾರಿ ಆಯುಕ್ತರಿಗೆ ಸಲ್ಲಿಸತ್ತಕ್ಕದ್ದು.

ಮೇಲೆ ನೀಡಿರುವ ನಿರ್ದೇಶನಗಳನ್ನು ಪಾಲಿಸುವಲ್ಲಿ ವಿಫಲರಾದ ವ್ಯಾಪ್ತಿಯ ವಲಯದ ಹಾಗೂ ಉಪ ವಿಭಾಗದ ಕಾರ್ಯನಿರ್ವಾಹಕ ಸಿಬ್ಬಂದಿಯ ವಿರುದ್ಧ ಕರ್ತವ್ಯ ನಿರ್ಲಕ್ಷ್ಯತನಕ್ಕಾಗಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

**ಕರಡು ಅಬಕಾರಿ ಆಯುಕ್ತರಿಂದ**
**ಅನುಮೋದಿಸಲ್ಪಟ್ಟಿದೆ.**

**ಅಬಕಾರಿ ಆಯುಕ್ತರ ಪರವಾಗಿ**

<u>ಇವರಿಗೆ:-</u>

1. ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಅಬಕಾರಿ ಜಂಟಿ ಆಯುಕ್ತರು, ರಾಜ್ಯ ವಿಚಕ್ಷಣ ದಳ, ಬೆಂಗಳೂರು
3. ರಾಜ್ಯ ಎಲ್ಲಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರುಗಳಿಗೆ ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.